ಆ. ಹಿಂದುಳಿದ ಪ್ರದೇಶದ ವ್ಯಾಪ್ತಿಯಲ್ಲಿ ಹಾಲಿ ಅನುದಾನಿತ ಪ್ರೌಢಶಾಲೆಗಳು ಇರುವ ಸ್ಥಳಗಳು ಸೇರುತ್ತವೇಯೇ;

ಇ. ಹಾಲಿ ಅನುದಾನಿತ ಶಾಲೆಗಳಿರುವ ಗ್ರಾಮಗಳಲ್ಲಿ ಸರ್ಕಾರಿ ಪ್ರೌಢಶಾಲೆ ಆರಂಭಿಸಿದಲ್ಲಿ ಅಲ್ಲಿನ ಮಕ್ಕಳ ಸಂಖ್ಯೆ ಕಡಿಮೆಯಾಗಿ ಶಿಕ್ಷಕರು ನೌಕರಿ ಕಳೆದುಕೊಂಡರೆ ಯಾರು ಜವಾಬ್ದಾರರು; ವಿವರ ನೀಡುವುದು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ. ಸರ್ಕಾರಿ ಪ್ರೌಢಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲು ಆ ಸ್ಥಳದಲ್ಲಿ 5 ಕಿ.ಮೀ. ಒಳಗಡೆ ಬೇರೆ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪ್ರೌಢಶಾಲೆಗಳು ಇರಬಾರದು. ಸ್ಥಳೀಯರು ತಾತ್ಕಾಲಿಕವಾಗಿ ಕಟ್ಟಡ ಒದಗಿಸಬೇಕು. ಸ್ಥಳೀಯರು 1 ಲಕ್ಷ ರೂ ಕಟ್ಟಡಕ್ಕೆ ದೇಣಿಗೆ ನೀಡಬೇಕು ಹಾಗೂ ಪ್ರಯೋಗಾಲಯ, ಗ್ರಂಥಾಲಯಕ್ಕೆ ಸ್ಥಳೀಯರು 10 ಸಾವಿರ ರೂ. ದೇಣಿಗೆ ನೀಡಬೇಕು. ಹಾಗೂ ಪ್ರೌಢಶಾಲೆ ಪ್ರಾರಂಭಿಸಲು ಸ್ಥಳೀಯರು ಸ್ಥಳಾವಕಾಶ ನೀಡಬೇಕು.

ಆ. ಹಿಂದುಳಿದ ಪ್ರದೇಶದ ವ್ಯಾಪ್ತಿಯಲ್ಲಿ ಅನುದಾನಿತ ಪ್ರೌಢಶಾಲೆ ಇದ್ದಲ್ಲಿ, ಅಂತಹ ಕಡೆ ಅಗತ್ಯತೆ ಪರಿಗಣಿಸಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಅವಕಾಶವಿರುತ್ತದೆ.

ಇ. ಮೇಲಿನ 2 ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3738 (4053): ಶ್ರೀ ಮಾಧುಸ್ವಾಮಿ ಜೆ.ಸಿ. ಚಿಕ್ಕನಾಯಕನಹಳ್ಳಿ

ಡಾ॥ಹೆಚ್.ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಚಿಕ್ಕನಾಯಕನಹಳ್ಳಿ ಆಸ್ಪತ್ರೆಯಲ್ಲಿ ತೀರಾ ಅವಶ್ಯಕವಾದ ಅನುಕೂಲತೆಗಳು ಇಲ್ಲದೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ. ಡಿ.ಜಿ.ಸೆಟ್ ಬೇಕೆಂದು ಎಷ್ಟು ವರ್ಷಗಳಿಂದ ಕೇಳಲಾಗುತ್ತಿದೆಯೆಂದು ತಿಳಿಸುವುದು;

ಇ. ಅಲ್ಲಿ ಶಸ್ತ್ರ ಚಿಕಿತ್ಸಾ ಘಟಕ ಇದ್ದು ಇದರ ಪ್ರಯೋಜನ ಪಡೆಯಲಾಗಿದೆಯೇ;

ಈ. ಖಾಲಿ ಇರುವ ಹುದ್ದೆಗಳ ನೇಮಕ ಮಾಡಲು ಸಾಧ್ಯವಾಗದ ಮೇಲೆ ಹುದ್ದೆಗಳನ್ನು ಸೃಷ್ಟಿಸಿರುವ ಔಚಿತ್ಯವೇನು;

ಉ. ಹಾಗಿದ್ದರೆ, ಖಾಲಿ ಇರುವ ಈ ಹುದ್ದೆಗಳನ್ನು ತುಂಬಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮವೇನು?

ಡಾ॥ಹೆಚ್.ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು)

ಅ. ಸಮುದಾಯ ಆರೋಗ್ಯ ಕೇಂದ್ರ ಇಲ್ಲಿ ಪ್ರಯೋಗಾಲಯ, ಕ್ಷ-ಕಿರಣ ಶಸ್ತ್ರಚಿಕಿತ್ಸಾ ಕೊಠಡಿ, ನೇತ್ರ ಚಿಕಿತ್ಸಾ ಘಟಕ ಅಂಬುಲೆನ್ಸ್ ವಾಹನ, ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ವಾರ್ಡ್ ಈ ಎಲ್ಲಾ ಸೌಲಭ್ಯಗಳು ಇರುತ್ತವೆ. ಜನರೇಟರ್ ಸೌಲಭ್ಯ ಇರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ. ಡೀಸೇಲ್ ಜನರೇಟರ್ ಸೆಟ್ ಸರಬರಾಜಿಗೆ 3.3.2004 ರಿಂದ ಪತ್ರ ವ್ಯವಹಾರ ಮಾಡಿ ಕೇಳಲಾಗಿದೆ. ಈ ಬಗ್ಗೆ ಜಿಲ್ಲಾ ಪಂಚಾಯತ್ ತುಮಕೂರು ಇವರಿಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಇ. ಪ್ರಯೋಜನ ಪಡೆಯಲಾಗುತ್ತಿದೆ.

ಈ. ಕೆಲವೊಂದು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿರುವುದಿಲ್ಲ, ಲಭ್ಯತೆಯ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಉ. ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ಕೊಡಲಾಗಿದೆ. ಹಾಗೂ ಉಳಿದ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲು ವಿಶೇಷ ನೇರ ನೇಮಕಾತಿ ಮುಖಾಂತರ ಕ್ರಮ ಕೈಗೊಳ್ಳಲಾಗುತ್ತಿದೆ.

3739(4054) : ಶ್ರೀ ಮಾಧುಸ್ವಾಮಿ ಜೆ.ಸಿ. (ಚಿಕ್ಕನಾಯಕನಹಳ್ಳಿ)

ಡಾ॥ಹೆಚ್.ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮತ್ತಿಘಟ್ಟ ಸರ್ಕಾರಿ ಆಸ್ಪತ್ರೆಯನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಿದ್ದು ಯಾವಾಗ;

ಆ. ಆ ಎನ್.ಜಿ.ಓ ಸಂಸ್ಥೆಯ ಪೂರ್ವ ಇತಿಯಾಸವೇನು; (ವಿವರ ನೀಡುವುದು);

ಇ. ಅಂದಿನಿಂದ ಈವರೆವಿಗೂ ಆಸ್ಪತ್ರೆ ಕೆಲಸ ನಿರ್ವಹಿಸದಿರುವುದು ಸರ್ಕಾರದ ಗಮನದಲ್ಲಿದೆಯೇ;

ಈ. ಈ ತೀರ್ಮಾನವನ್ನು ಬದಲಾಯಿಸಿ ಮತ್ತೆ ಸರ್ಕಾರವೇ ಆಸ್ಪತ್ರೆಯನ್ನು ವಹಿಸಿಕೊಳ್ಳುವಂತೆ ಸಾರ್ವಜನಿಕರು ಮತ್ತು ಜನ ಪ್ರತಿನಿಧಿಗಳು ಒತ್ತಾಯ ಮಾಡಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಉ. ಹಾಗಿದ್ದಲ್ಲಿ ತೀರ್ಮಾನ ಮಾಡಲು ಇರುವ ತೊಡಕಾದರೂ ಏನು?